ನನಗೆ ಆಶ್ಚರ್ಯವಾಗುತ್ತದೆ—ಈ ಕತೆಗಳು ನನ್ನೊಳಗೆ ಹುಟ್ಟಿದ್ದು ಹೇಗೆ ಎಂದು. ಅವುಗಳ ಮೇಲೆ ಕಣ್ಣಾಡಿಸಿದಾಗ, ಕೆಲವು ವಾಕ್ಯಗಳನ್ನು ಕಂಡು ಇವನ್ನು ನಾನೇ ಬರೆದೆನೇ ಎಂದು ಅನುಮಾನವಾಗುತ್ತದೆ. ಕತೆಯ ಸ್ಥೂಲ ರೂಪವೊಂದು ಮನಸ್ಸಿನಲ್ಲಿ ಮೂಡಿದ್ದು ನಿಜ. ಕೆಲವೊಮ್ಮೆ ಕತೆಯಲ್ಲಿ ಘಟನೆಗಳನ್ನು ಪೇರಿಸುವಾಗ 'ಇದನ್ನು ಹೇಳಿದ ಮೇಲೆ ಇದನ್ನು ಹೇಳಬೇಕು ಮತ್ತು ಕೊನೆಗೊಳಿಸುವುದು ಈ ರೀತಿಯಾಗಿರಲಿ' ಎಂದು ಸಿದ್ಧತೆ ಮಾಡಿಕೊಂಡದ್ದಿದೆ. ಆದರೆ ಇಂಥದೇ ವಾಕ್ಯ ಇರಲಿ, ಅವುಗಳಲ್ಲಿ ಇವೇ ಶಬ್ದಗಳಿರಲಿ ಎಂದು ಖಚಿತ ನಿರ್ಧಾರವನ್ನು ನಾನು ಮಾಡಿಕೊಂಡಿರುವುದಿಲ್ಲ. ಈ ಲೇಖನ ಬರೆಯುವಾಗಲೂ ಈ ವಾಕ್ಯ ಬರೆದ ಮೇಲೆ ಮುಂದಿನ ವಾಕ್ಯ ಏನು ಎಂಬುದರ ಬಗ್ಗೆ ನಿಶ್ಚಿತ ಪದಪುಂಜಗಳನ್ನು ನಾನು ಆರಿಸಿಕೊಂಡಿಲ್ಲ. ಆದರೆ ಏನನ್ನು ನನ್ನ ಓದುಗನಿಗೆ ಹೇಳಬೇಕೋ ಅದನ್ನು ಸ್ಪಷ್ಟವಾಗಿ ಅವರಿಗೆ ಅರ್ಥವಾಗುವ ಹಾಗೆ ಹೇಳಬೇಕು ಎಂಬ ಇರಾದೆಯನ್ನು ಖಂಡಿತ ಮಾಡಿರುತ್ತೇನೆ. ಈ ಒಟ್ಟು ಕ್ರಿಯೆ ಪ್ರಜ್ಞಾಪೂರ್ವಕವಾಗಿ ಮಾಡುತ್ತೇನೋ ಇಲ್ಲವೋ ಎಂಬ ಬಗ್ಗೆ ನನಗೇ ಅನುಮಾನಗಳಿವೆ.

ನನ್ನ ಕತೆಗಳೆಲ್ಲ ನನ್ನ ಅನುಭವಗಳಲ್ಲೇ ಕುಡಿಯೊಡೆದಿವೆ ಎಂದು ಸಾರಾಸಗಟಾಗಿ ಹೇಳಲಾರೆ. ಅನುಭವ ಒಂದು ಕೇಂದ್ರ ಬಿಂದು ಮಾತ್ರ. ಅದರ ಸುತ್ತ ಕಲ್ಪನೆಗಳು ಗಿರಕಿ ಹೊಡೆಯುತ್ತವೆ. ಇತ್ತೀಚೆ ಬೆಂಗಳೂರಿನಲ್ಲಿ ಮುಸ್ಸಂಜೆಯ ಹೊತ್ತು ಆಟೊ ಹಿಡಿಯಲು ಹೆಣ್ಣೊಬ್ಬಳು ಪರದಾಡುವ ಒಂದು ಕತೆಯನ್ನು ಬರೆದು 'ಮಯೂರ'ದಲ್ಲಿ ಪ್ರಕಟಣೆಗೆ ಕಳುಹಿಸಿದೆ. ನಾನೇ ಒಂದು ದಿನ ರಂಗಶಂಕರಕ್ಕೆ ಹೋದವನು ಜಿಟಿಜಿಟಿ ಮಳೆಯಲ್ಲಿ ಮರಳುವಾಗ ಪಟ್ಟ ಪರಿಪಾಟಲು ಅದು. ಕತೆಯಾಗಿಸುವಾಗ ಮಾತ್ರ 'ನಾನು' ಬದಲಾಗಿ ಒಬ್ಬ ಸಂಸಾರಸ್ಥ ಸ್ತ್ರೀಯ ಮೂಲಕ ಅದನ್ನು ಕಂಡಂತೆ ಚಿತ್ರಿಸಿ ಅವಳ ಆತಂಕ, ತಾಪತ್ರಯಗಳು, ಸಂಕಟ, ರಸ್ತೆಯ ಅಸ್ತವ್ಯಸ್ತೆ, ಬೆಂಗಳೂರಿನ ಕೆಲವು ಆಟೊ ಡ್ರೈವರ್‌ಗಳ ಅಸಹಕಾರ ನಡತೆ ಇವೆಲ್ಲ ಆಯಮಗಳನ್ನು ಕೊಡುತ್ತಾ ಓದುಗರ ಅನುಕಂಪ ಅವಳ ಮೇಲೆ ಉಂಟಾಗುವಂತೆ ಬಿಂಬಿಸಿದೆ.

ನಾನು ತಿಳಿದುಕೊಂಡಂತೆ, ಅಥವಾ ನಂಬಿದಂತೆ, ಪ್ರತಿಯೊಬ್ಬ ಲೇಖಕನಿಗೂ ವಿಶಾಲವಾದ ಓದು ಬೇಕೇ ಬೇಕು. ಅವನ ಜಗತ್ತಿನ ಹಿಗ್ಗುವಿಕೆ, ಆ ಜಗತ್ತನ್ನು ಕಾಣುವ ದೃಷ್ಟಿ, ಒಂದು ಮನೋಧರ್ಮ ಮತ್ತು ಮಾನವೀಯತೆಯನ್ನು ಹುಡುಕುವ ಚಿಕಿತ್ಸಕ ಬುದ್ಧಿ ಇವೇ ಮುಂತಾದುವುಗಳು ಒಳ್ಳೆಯ ಸಾಹಿತ್ಯ ಓದುವುದರಿಂದ ಗಟ್ಟಿಯಾಗುತ್ತವೆ. ಇದನ್ನು ನಾನು ಪ್ರತಿಭೆ ಎಂದು ಕರೆಯಲಾರೆ. ಇದು ಸಾಧನೆಯ ಮೆಟ್ಟಿಲು. ವಿಮರ್ಶಕರ ಕಣ್ಣಿಗೆ ಅವು ಬಿದ್ದರೆ ಹೊಸ ಧ್ವನಿಗಳನ್ನು ಅವರು ಶೋಧಿಸಿ ತೋರಿಸಬಹುದು. ಒಂದು ಕತೆಯನ್ನು ಬರೆಯುವಾಗ ಅವು ಇಷ್ಟು ಧ್ವನಿಗಳನ್ನು ಹೊರಡಿಸಬೇಕು ಎಂದು ಲೆಕ್ಕ ಹಾಕಿ ಬರೆಯುವುದು ನನ್ನ ಜಾಯಮಾನವಲ್ಲ. ಕತೆ ಬರೆದು ಮುಗಿಸುವ ತನಕ ನಾನು ಅದನ್ನು ಇನ್ನೊಬ್ಬರಿಗೆ ಬಾಯಿಯಲ್ಲಿ ಹೇಳುವುದೇ ಇಲ್ಲ. ಎಲ್ಲಾದರೂ ಹೇಳಿದರೆ ಮುಂದೆ ಆ ಕತೆಯನ್ನು ನನ್ನಿಂದ ಬರೆಯುವುದಕ್ಕೇ ಸಾಧ್ಯವಾಗುವುದಿಲ್ಲ. ಆದರೆ ನನ್ನ ಕೆಲವು ಸಹಲೇಖಕರು ಬರೆಯುವ ಮುನ್ನವೇ ಹೇಳುತ್ತಾರೆನ್ನುವುದನ್ನು ನಾನು ಗಮನಿಸಿದ್ದೇನೆ. ಆಮೇಲೆ ಬರೆದು ದೊಡ್ಡ ಹೆಸರುಗಳಿಸಿರುವುದನ್ನೂ ಕಂಡಿದ್ದೇನೆ. ನನ್ನಿಂದ ಅದು ಸಾಧ್ಯವಿಲ್ಲ. ಒಮ್ಮೆ ಬರೆದಾದ ಮೇಲೆ ಆರೆಂಟು ದಿನಗಳ ಕಾಲ ಗುಪ್ತಧನದಂತೆ ಅದನ್ನು ಮುಚ್ಚಿಟ್ಟಿರುತ್ತೇನೆ. ಆ ಮೇಲೆ ತೆಗೆದು ಓದುವಾಗ ಅಲ್ಲಿರುವ ಕೆಲವು ನ್ಯೂನತೆಗಳನ್ನು ತಿದ್ದಿ ಹೊಸ ಪ್ರತಿ ಮಾಡುತ್ತೇನೆ. ಕೆಲವೊಮ್ಮೆ